ಕೊಂಡಿದ್ದೇವೆ. ಆದರೂ ಒಬ್ಬ ಡಾಕ್ಟರ್ ಆದ ತಮಗೆ ತೃಪ್ತಿ ತಂದಿಲ್ಲವೆಂದರೆ, ಸತ್ಯಕ್ಕೆ ದೂರವಾದ ಮಾತನ್ನು ತಾವು ಹೇಳುತ್ತಿದ್ದೀರೆಂಬುದು ನನ್ನ ಅಭಿಪ್ರಾಯ. ಇನ್ನು ಏನೇ ಇದ್ದರು ಅಧ್ಯಕ್ಷರ ಮೂಲಕ ತಮಗೆ ತಿಳಿಸುವುದು ಏನೆಂದರೆ, ಇವತ್ತು H1N1 ಕಾಯಿಲೆ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ಬೇರೆ ರಾಜ್ಯಕ್ಕಿಂತ ಬಹಳ ಉತ್ತಮವಾದ ಕೆಲಸ ಮಾಡಿದ್ದೇವೆಂದು ಖಾಸಗಿ ಆಸ್ಪತ್ರೆಯವರು ಕೂಡ ಶಹಭಾಷ್ ಗಿರಿಯನ್ನು ಕೊಟ್ಟಿದ್ದಾರೆಂದು ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಅಧ್ಯಕ್ಷರು : ಕರಡಿ ಸಂಗಣ್ಣನವರು ಬಂದಿಲ್ಲ, ನನ್ನ ಅನುಮತಿಯನ್ನು ತೆಗೆದುಕೊಂಡಿದ್ದಾರೆ. ಅವರ ಪರವಾಗಿ ಬಯ್ಯಾಪುರ ಅವರು ಪ್ರಶ್ನೆಯನ್ನು ಕೇಳುವುದು.

ಕಾರ್ಮಿಕ ವಿಮಾ ಚಿಕಿತ್ಸಾಲಯ ಪ್ರಾರಂಭ

57 (370) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಕಾರ್ಮಿಕ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ನಗರದಲ್ಲಿ ಕಾರ್ಮಿಕರ ವಿಮಾ ಆಸ್ಪತ್ರೆಯನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ' ಹಾಗಿದ್ದಲ್ಲಿ, ಯಾವ ಸಾಲಿನಿಂದ ಪ್ರಾರಂಭಿಸಲಾಗುವುದು; (ವಿವರಗಳನ್ನು ನೀಡುವುದು)

ಆ) ಕಾರ್ಮಿಕ ವಿಮಾ ಆಸ್ಪತ್ರೆಯನ್ನು ಪ್ರಾರಂಭಿಸಲು ಸರ್ಕಾರವು ಮಂಜೂರು ಮಾಡುವ ಅನುದಾನದ ಮೊತ್ತ ಎಷ್ಟು;

ಇ) ಕಾರ್ಮಿಕ ವಿಮಾ ಆಸ್ಪತ್ರೆಯನ್ನು ತೆರೆಯಲು ಸರ್ಕಾರದ ಸ್ವಂತ ಕಟ್ಟಡ ಇದೆಯೇ ಅಥವಾ ಇಲ್ಲದಿದ್ದಲ್ಲಿ ಹೊಸ ಕಟ್ಟಡವನ್ನು ನಿರ್ಮಿಸಲು ಸರ್ಕಾರದ ಕ್ರಮ ಕೈಗೊಂಡ ಬಗ್ಗೆ ವಿವರ ನೀಡುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) ಕೊಪ್ಪಳ ನಗರದಲ್ಲಿ ಪೂರ್ಣಕಾಲಿಕ ಕಾರಾವಿ ಚಿಕಿತ್ಸಾಲಯವನ್ನು ಪ್ರಾರಂಭಿಸುವ ಪ್ರಸ್ತಾಪವಿದ್ದು, ಕೇಂದ್ರ ಕಾರಾವಿ ನಿಗಮದ ಸಹಮತವನ್ನು ಪಡೆಯಲು ಪ್ರಸ್ತಾವನೆ ಸಲ್ಲಿಸಲಾಗಿದೆ.

ಆ) ಹೊಸ ಭೌಗೋಳಿಕ ಪ್ರದೇಶದಲ್ಲಿ ಪ್ರಾರಂಭಿಕ 03 ವರ್ಷದ ಪೂರ್ಣ ವೆಚ್ಚವನ್ನು ಕಾರಾವಿ ನಿಗಮವೇ ಭರಿಸುವುದರಿಂದ ರಾಜ್ಯ ಸರ್ಕಾರದ ಅನುದಾನ ಮಂಜೂರಾತಿ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲ್ಲ. ಪ್ರಾರಂಭಿಕ ಅವಧಿಯಲ್ಲಿ ಬಾಡಿಗೆ ಕಟ್ಟಡದಲ್ಲಿ ಚಿಕಿತ್ಸಾಲಯವನ್ನು ಪ್ರಾರಂಭಿಸಲಾಗುವುದು.

ಶ್ರೀ ಅಮರೇಗೌಡ ಬಯ್ಯಾಪುರ : ಮಾನ್ಯ ಅಧ್ಯಕ್ಷರೆ, ಈ ಕೊಪ್ಪಳ ನಗರದಲ್ಲಿ 58 ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿದ್ದು ಸುಮಾರು 5 ಸಾವಿರಕ್ಕಿಂತ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಇದುವರೆಗೆ ಒಂದು ವಿಮಾ ಆಸ್ಪತ್ರೆಯನ್ನು ತೆರೆಯುವುದಕ್ಕಾಗಲಿಲ್ಲ, ಆದುದರಿಂದ ಕಾರ್ಮಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಕಾರ್ಮಿಕರಿಗೆ accidents ಆದಾಗ ಮತ್ತು ಅವರು ಮೂಲಭೂತ ಸೌಕರ್ಯಗಳನ್ನು ಪಡೆಯುವಾಗ ಅನುಭವಿಸುವ ಅನೇಕ ತೊಂದರೆಗಳನ್ನು ನಾವು ನೋಡುತ್ತಿದ್ದೇವೆ. ಅದಕ್ಕಾಗಿ ಮೂರು ವರ್ಷಗಳಿಂದ ಅಲ್ಲಿ ಒಂದು ಆಸ್ಪತ್ರೆಯನ್ನು ತೆರೆಯಿರೆಂದು ಕಾರ್ಮಿಕ ಇಲಾಖೆಗೆ ಅನೇಕ ಪ್ರಸ್ತಾವನೆ ಮತ್ತು ಮನವಿಗಳನ್ನು ಆ ಜಿಲ್ಲೆಯಿಂದ ಸಲ್ಲಿಸುತ್ತಿದ್ದೇವೆ. ಅದಕ್ಕೆ ಮಾನ್ಯ ಸಚಿವರಿಗೆ ನಮ್ಮ ಅನೇಕ ಶಾಸಕರು ಅನೇಕ ಮನವಿಗಳನ್ನು ಈ ಬಗ್ಗೆ ಕೂಡ ಕೊಟ್ಟಿದ್ದೇವೆ. ಆದರೆ ಸಚಿವರು, ನಾವು ಕೇಂದ್ರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುತ್ತೇವೆಂದು ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿಯವರೆಗೆ ಅದರಿಂದ ಏನೂ ಪ್ರಯೋಜನವಾಗಿಲ್ಲ. ಅದಕ್ಕಾಗಿ ಸಚಿವರಲ್ಲಿ, ಪ್ರಸ್ತಾವನೆಯನ್ನು ಸಲ್ಲಿಸಿ, ಅದು ಮಂಜೂರಾಗಿ ಬರುವುದಕ್ಕಿಂತ ಪೂರ್ವದಲ್ಲಿ ರಾಜ್ಯ ಸರ್ಕಾರ ಅದಕ್ಕೆ ಏನಾದರೂ ಒಂದು ಕೆಲಸ ಮಾಡಿ, ತಾವೇ ಏತಕ್ಕೆ ಆಸ್ಪತ್ರೆಯನ್ನು ಪ್ರಾರಂಭ ಮಾಡಬಾರದು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ರಾಜ್ಯ ವಿಮಾ ಆಸ್ಪತ್ರೆಯನ್ನು ತೆರೆಯಬೇಕಾದರೆ 50.000 Insured Persons ಇರಬೇಕು. ಇಲ್ಲಿ ಚಿಕಿತ್ಸಾಲಯ ತೆರೆಯುವುದಕ್ಕೆ 3000 ಜನರಿರಬೇಕು. ತುಂಗಭದ್ರಾ ಡ್ಯಾಂನಲ್ಲಿ ಒಂದು ಚಿಕಿತ್ಸಾಲಯವನ್ನು ತೆರೆದಿದ್ದೇವೆ. ಇಲ್ಲಿ 2015 ಸಂಖ್ಯೆ ಇರುವುದರಿಂದ, 3000 ಸಂಖ್ಯೆ ಇಲ್ಲದಿರುವುದರಿಂದ ಆಸ್ಪತ್ರೆ ತೆಗೆಯುವುದಕ್ಕಾಗಲಿಲ್ಲ. ಈಗ ಆ ಸಂಖ್ಯೆ ಬಂದಿದೆ, ಕೊಪ್ಪಳ ಅದಕ್ಕೆ ಸೇರಿದ 7–8 ಗ್ರಾಮಗಳಲ್ಲಿ 3000 ಸಂಖ್ಯೆಗಿಂತ ಮೇಲೆ ಹೋಗಿದೆ, ಈಗ ಕೊಪ್ಪಳದಲ್ಲಿ ತೆರೆಯುತ್ತೇವೆ. ಏಕೆಂದರೆ, ಇದನ್ನು ರಾಜ್ಯ ಸರ್ಕಾರ ಮಾಡುವುದಕ್ಕೆ ಬರುವುದಿಲ್ಲ, ರಾಜ್ಯ ಸರ್ಕಾರ $1/7^{th}$ Portion ಕೊಡುತ್ತದೆ, ಕೇಂದ್ರ ಸರ್ಕಾರ $7/8^{th}$ Portion ಕೊಡುತ್ತದೆ, ಅಂದರೆ

Rs.87=50 ಆಸ್ಪತ್ರೆ ಚಿಕಿತ್ಸಾಲಯಗಳಲ್ಲಿ ಔಷಧಿಗಳು ಮತ್ತು ಆಸ್ಪತ್ರೆ ತೆರೆಯುವ ವಿಷಯದಲ್ಲಿ ರೂ.87=50, ನಮ್ಮದು ರೂ.12=50 share ಇದರಲ್ಲಿದೆ. ಆ ದೃಷ್ಟಿಯಿಂದ ಇವತ್ತು ಆಸ್ಪತ್ರೆಯನ್ನು ನಾವೇ (ರಾಜ್ಯ ಸರ್ಕಾರ) ತೆರೆಯವುದಕ್ಕೆ ಬರುವುದಿಲ್ಲ. ಇವತ್ತು ಕೇಂದ್ರ ಸರ್ಕಾರದ್ದು ESIC ಎಂದೇನಿದೆ, ಅವರ ಜೊತೆಯಲ್ಲಿ ಮಾತನಾಡಿದ್ದೇವೆ, ಕೊಪ್ಪಳದಲ್ಲಿ ಚಿಕಿತ್ಸಾಲಯವನ್ನು ತೆರೆಯುವುದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಅಲ್ಲಿ ಸಂಖ್ಯೆ 3000 ದಾಟಿದೆ, ಮೂರು ವರ್ಷ ಕೇಂದ್ರ ಸರ್ಕಾರವೇ ಉಚಿತವಾಗಿ ನೋಡಿಕೊಳ್ಳುತ್ತದೆ, ನಮ್ಮದೇನು ಭಾಗವಿರುವುದಿಲ್ಲ. ಈಗಾಗಲೇ ಜಾಗ ನೋಡುವುದಕ್ಕೆ ಬಿಟ್ಟಿದ್ದೇವೆ. ಜಾಗ ತೆಗೆದುಕೊಳ್ಳುತ್ತೇವೆ. 3000 IPS ಇದ್ದಾರೆ. ಎಲ್ಲಾ ನೋಡಿಕೊಳ್ಳುವ ವ್ಯವಸ್ಥೆಯನ್ನು 2 ಅಥವಾ 3 ತಿಂಗಳಲ್ಲಿ ಮಾಡಿಕೊಡುತ್ತೇವೆ.

ಮಸೀದಿಗಳಿಂದ ಬರುವ ಆದಾಯ

58 (362) ಶ್ರೀಮತಿ ಮಲ್ಲಿಕಾ ಪ್ರಸಾದ್ (ಪುತ್ತೂರು) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಮಸೀದಿಗಳಿಂದ ಸರ್ಕಾರಕ್ಕೆ ಕಳೆದ ಮೂರು ವರ್ಷಗಳಿಂದ ಬಂದ ಆದಾಯವೆಷ್ಟು;

ಆ) ಕರ್ನಾಟಕ ರಾಜ್ಯದ ವಕ್ಫ್ ಮಂಡಳಿಗೆ ಇತರೆ ಇಲಾಖೆಗಳಿಂದ ಮಸೀದಿಗಳ ಅಭಿವೃದ್ಧಿಗೆ ಕಳೆದ ಮೂರು ವರ್ಷಗಳಲ್ಲಿ ಖರ್ಚು ಮಾಡಿದ ಮೊತ್ತವೆಷ್ಟು;

ಇ) ಹಜ್ ಯಾತ್ರೆಗೆ ಕರ್ನಾಟಕ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ವರ್ಷಾವಾರು ನೀಡಿದ ಸಹಾಯಧನ ಎಷ್ಟು;

ಈ) ಕಳೆದ ಮೂರು ವರ್ಷಗಳಿಂದ ಒಟ್ಟು ಎಷ್ಟು ಮಂದಿಗೆ ತಲಾ ಎಷ್ಟು ಸಹಾಯಧನ ನೀಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

ಪ್ರೊ॥ ಡಾ. ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿರುವ ಮಸೀದಿಗಳಿಂದ ಸರ್ಕಾರಕ್ಕೆ ಯಾವುದೇ ಆದಾಯ ಬರುವುದಿಲ್ಲ.